ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 25 ಆಕೋಜೇ 2019.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ
ಬೆಂಗಳೂರು, ದಿನಾಂಕ:25-7-2019.

## ಅಧಿಸೂಚನೆ

ವಿಷಯ:- ಕರ್ನಾಟಕ ಸರ್ಕಾರ ಸಚಿವಾಲಯದ ಸಂಸದೀಯ ವ್ಯವಹಾರಗಳ ಇಲಾಖೆಯ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ದಿನಾಂಕ:20-10-1986 ರಿಂದ 31-12-2018ರ ಅವಧಿಗೆ, ದಿನಾಂಕ: 01-01-2019ರಲ್ಲಿದ್ದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:- (1) ಅಧಿಸೂಚನೆ ಸಂಖ್ಯೆ: ಸಿಆಸುಇ 25 ಆಕೋಜೇ 2014, ದಿನಾಂಕ: 21-01-2015.
(2) ಅಧಿಸೂಚನೆ ಸಂಖ್ಯೆ: ಸಿಆಸುಇ 28 ಆಕೋಜೇ 2015, ದಿನಾಂಕ: 24-07-2015.
(3) ಅಧಿಸೂಚನೆ ಸಂಖ್ಯೆ: ಸಿಆಸುಇ 24 ಆಕೋಜೇ 2016, ದಿನಾಂಕ: 28-07-2016.
(4) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 182 ಎಸ್‌ಆರ್‌ಆರ್ 2011, ದಿನಾಂಕ:06-5-2017.
(5) ಅಧಿಸೂಚನೆ ಸಂಖ್ಯೆ: ಸಿಆಸುಇ 23 ಆಕೋಜೇ 2017, ದಿನಾಂಕ:29-1-2018.
(6) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ:27-2-2019
(7) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ:15-5-2019.
(8) ಅಧಿಸೂಚನೆ ಸಂಖ್ಯೆ: ಸಿಆಸುಇ 25 ಆಕೋಜೇ 2019, ದಿನಾಂಕ:17-06-2019.

---

ಶ್ರೀ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ:09.02.2017ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣಾ ಅಧಿನಿಯಮ, 2002ರ ಪ್ರಕರಣ 3 ಮತ್ತು 4ನ್ನು ಸಂವಿಧಾನದ ಅನುಚ್ಛೇದ-14 ಮತ್ತು 16ಕ್ಕೆ ಅಧಿಕಾರಾತೀತ (Ultra vires Articles 14 and 16 of the Constitution)ಎಂದು ಆದೇಶಿಸಿರುತ್ತದೆ.

2. ಈ ಹಿನ್ನೆಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ವಿಭಾಗವು ಉಲ್ಲೇಖ(4)ರಲ್ಲಿನ ದಿನಾಂಕ:06.05.2017ರ ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿ ಅನುಸರಿಸಿರುವ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ.

3. ಉಲ್ಲೇಖ(4)ರ ಸರ್ಕಾರದ ಆದೇಶದ ಮಾರ್ಗಸೂಚಿಯನುಸಾರ ದಿನಾಂಕ:01.01.2017ರಲ್ಲಿದ್ದಂತೆ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಮೀಸಲಾತಿಯನ್ನು ಅಳವಡಿಯನ್ನು ಮುಂಬಡ್ತಿಯನ್ನು ನೀಡಿದ ಅಧಿಕಾರಿಗಳು ಯಾರೂ ಇಲ್ಲದಿರುವುದರಿಂದ ಪಟ್ಟಿಯನ್ನು ಪರಿಷ್ಕರಿಸಿರುವುದಿಲ್ಲ.

4. ತದನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011-ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ.ಸಂಖ್ಯೆ:1151/2018ರಲ್ಲಿ ದಿನಾಂಕ:10.05.2019ರಂದು ನೀಡಿದ

ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:23.06.2018ರಂದು ಪ್ರಕಟಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಸಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿರುವುದರಿಂದ, 2017ರ ಅಧಿನಿಯಮದನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(6) ಮತ್ತು (7)ರ ಸರ್ಕಾರದ ಆದೇಶಗಳಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

5. ಉಲ್ಲೇಖ(6) ಮತ್ತು (7)ರ ಸರ್ಕಾರದ ಆದೇಶಗಳ ಸೂಚನೆಗನುಸಾರ ವಿಶೇಷ ಪ್ರಾರೂಪಕಾರ ಮತ್ತು ಪದನಿಮಿತ್ತ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಲಾಗಿ, ಈ ಹುದ್ದೆಯಲ್ಲಿ ಮೀಸಲಾತಿಯನ್ನು ಅಳವಡಿಸಿ ಮುಂಬಡ್ತಿಯನ್ನು ನೀಡಿದ ಅಧಿಕಾರಿಗಳು ಯಾರೂ ಇಲ್ಲದಿರುವುದರಿಂದ, ಈ ವೃಂದದ ಜೇಷ್ಠತಾ ಪಟ್ಟಿಯು ಪರಿಷ್ಕರಣೆಗೊಂಡಿರುವುದಿಲ್ಲ.

6. ದಿನಾಂಕ:20-10-1986 ರಿಂದ 31.12.2018ರ ಅವಧಿಗೆ ದಿನಾಂಕ:01.01.2019ರಲ್ಲಿದ್ದಂತೆ, ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(8)ರ ಅಧಿಸೂಚನೆಯಲ್ಲಿ ದಿನಾಂಕ:17-06-2019ರಂದು ಪ್ರಕಟಿಸಿ, ಈ ಬಗ್ಗೆ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು. ಈ ವೃಂದಕ್ಕೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

7. ಆದ್ದರಿಂದ, ಈ ವೃಂದದ ದಿನಾಂಕ:20-10-1986 ರಿಂದ 31-12-2018ರವರೆಗಿನ ಅವಧಿಗೆ ದಿನಾಂಕ:01-01-2019ರಲ್ಲಿದ್ದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು **ಅನುಬಂಧ-1**ರಲ್ಲಿರುವಂತೆ ಇದರೊಂದಿಗೆ ಲಗತ್ತಿಸಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
B. R. Nagarathna
(ಬಿ.ಆರ್. ನಾಗರತ್ನ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.&ಆ.ಸು.ಇಲಾಖೆ (ಆಡಳಿತ ಕೋಶ)

**ಪ್ರತಿಗಳು:**

1) ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ
2) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ(ಸೇವೆಗಳು-6-ಇ2)
3) ಮುಖ್ಯ ಗ್ರಂಥಾಧಿಕಾರಿ, ಸಚಿವಾಲಯ ಗ್ರಂಥಾಲಯ, ವಿಧಾನಸೌಧ/ವಿಕಾಸಸೌಧ.
4) ಸಂಬಂಧಪಟ್ಟ ಅಧಿಕಾರಿಗಳಿಗೆ.
5) ಶಾಖಾ ರಕ್ಷಾ ಕಡತ / ಹೆಚ್ಚುವರಿ ಕಡತ.

ವೆಬ್‌ಸೈಟ್:- www.karnataka.gov.in -> Status of Files/Letters.

ಅನುಬಂಧ–1

| ದಿನಾಂಕ:20.10.1986 ರಿಂದ ದಿ:31.12.2018ರವರೆಗೆ ದಿನಾಂಕ:01.01.2019ರಲ್ಲಿದ್ದಂತೆ ವಿಶೇಷ ಪ್ರಾರೂಪಕಾರ ಮತ್ತು ಪದನಿಮಿತ್ತ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಅಂತಿಮ ಜೇಷ್ಠತಾ ಪಟ್ಟಿ | | | | | | | |
|---|---|---|---|---|---|---|---|
| ಕ್ರ.ಸಂ | ಹೆಸರು | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಿಶೇಷ ಪ್ರಾರೂಪಕಾರ ಮತ್ತು ಪದನಿಮಿತ್ತ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದಕ್ಕೆ ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ | ಷರಾ |
| 1 | 2 | 3 | 4 | 5 | 6 | 7 | 8 |
| 1 | ಕೆ.ಈಶ್ವರ್ ಭಟ್ | – | 05.08.1934 | 02.07.1964 | 20.10.1986 | 20.10.1986 | |
| | ಕೆ.ಆರ್.ರಾಮಸ್ವಾಮಿ ಅಯ್ಯಂಗಾರ್ | – | 06.04.1930 | 26.07.1965 | – | – | ವಯೋ ನಿವೃತ್ತಿ |
| 2 | ಬಿ.ಪಿ.ಜಯಕರ್ | – | 03.01.1941 | 04.01.1971 | – | – | |
| | ವಿ.ಎಂ.ಹೆಬ್ಬಾರ್ | – | 03.06.1935 | 09.01.1960 | – | – | ವಯೋ ನಿವೃತ್ತಿ |
| 3 | ಹೆಗ್ಡೆ ಎಂ.ಆರ್ | – | 03.02.1947 | 01.10.1978 | – | – | ಮುಂಬಡ್ತಿ |
| | ರಾಜಪ್ಪ | – | 07.02.1935 | 11.04.1966 | – | – | ವಯೋ ನಿವೃತ್ತಿ |
| 4 | ಜಿ.ದಕ್ಷಿಣಾ ಮೂರ್ತಿ | – | 23.09.1947 | 13.10.1978 | – | – | ಮುಂಬಡ್ತಿ |
| 5 | ಜಿ.ಕೆ.ಬೋರೇಗೌಡ | – | 25.03.1949 | 07.03.1983 | – | – | –,,– |
| | ಹತ್ತಿ ಡಿ.ವಿ | – | 08.04.1946 | 13.10.1970 | – | – | ವಯೋ ನಿವೃತ್ತಿ |
| 6 | ಭಾ.ಭೀ.ಪತ್ತಾರ್ | – | 06.06.1955 | 12.07.1977 | 05.04.2013 | 05.04.2013 | |
| 7 | ಕೆ. ದ್ವಾರಕನಾಥ ಬಾಬು | – | 20.05.1958 | 09.11.1983 | 05.06.2013 | 05.06.2013 | |

B.R. Nagarathna

(ಬಿ.ಆರ್.ನಾಗರತ್ನ)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇ (ಆಡಳಿತ ಕೋಶ).